ಕರ್ನಾಟಕ ವಿಧಾನಸಭೆ

ಬುಧವಾರ 31ನೇ ಜುಲೈ 2002ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-00 ಗಂಟೆ 07 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ.ವಿ. ವೆಂಕಟಪ್ಪ) ರವರು,

ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ:- ಬೆಂಗಳೂರು ಜಲಮಂಡಳಿಯನ್ನು ಖಾಸಗೀಕರಣಗೊಳಿಸುವ ಬಗ್ಗೆ.

ಶ್ರೀ ವಿ. ಸೋಮಣ್ಣ :- ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ಜಲಮಂಡಳಿಯ ಬಗ್ಗೆ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ನಾವು ಸಮಯವನ್ನು ಕೇಳಿದ್ದೆವು. ತಾವು ಸಮಯ ಕೊಡುತ್ತೇವೆ ಎಂದು ಹೇಳಿದ್ದೀರಿ....

ಅಧ್ಯಕ್ಷರು :- ಒಂದು ನಿಮಿಷ ತಡೆಯಿರಿ. ಅದೆಲ್ಲಾ ಪ್ರಶ್ನೆಗಳು ಆದಮೇಲೆ ಪ್ರಸ್ತಾಪ ಮಾಡಿ. ಈ ಸಂದರ್ಭದಲ್ಲಿ ಬೇಡ. Not at this stage, you raist it after the Question Hour ಪ್ರಶ್ನೋತ್ತರಗಳು ಆದಮೇಲೆ ಪ್ರಸ್ತಾಪ ಮಾಡಿ.

1. ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು :- ಮಾನ್ಯ ಬಿ.ಎನ್. ಮಹಾಲಿಂಗಪ್ಪನವರೇ, ನಿಮ್ಮ ಪ್ರಶ್ನೆ (2043) ಟ್ರಾನ್ಸ್‌ಫರ್ ಆಗಿದೆ. ಮೂವತ್ತು ದಿವಸಗಳ ಕಾಲಾವಕಾಶ ಕೋರಲಾಗಿದೆ. ಎಂಟನೇ ತಾರೀಖಿನೊಳಗೆ ಉತ್ತರ ಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ.

ಗುಬ್ಬಿ ತಾಲ್ಲೂಕಿನ ಸಿ.ಎಸ್. ಪುರ ಹೋಬಳಿಯ ಇಡಗೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ನಿರ್ಮಾಣ

242 (1934) ಶ್ರೀ ವೀರಣ್ಣಗೌಡ. ಎನ್. (ಗುಬ್ಬಿ) (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಬ್ಬಿ ತಾಲ್ಲೂಕಿನ ಸಿ.ಎಸ್. ಪುರ ಹೋಬಳಿಯ ಇಡಗೂರು ಗ್ರಾಮಕ್ಕೆ 1997-98ನೇ ಸಾಲಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾಗಿದ್ದು ಇಡಗೂರು ಗ್ರಾಮಸ್ಥರು ಈಗಾಗಲೇ ಒಂದು ಲಕ್ಷ ರೂಪಾಯಿ ದೇಣಿಗೆ ಸರ್ಕಾರಕ್ಕೆ ಸಂದಾಯ ಮಾಡಿರುವುದು ನಿಜವೇ; ಇಡಗೂರು ಸರ್ವೆ ನಂ. 124ನೇ ಸರ್ಕಾರಿ ಕರಾಬು ಜಮೀನಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕಟ್ಟಲು ಸರ್ಕಾರವು ದಿನಾಂಕ: 24-7-2000ರಂದು ಆರೋಗ್ಯ ಇಲಾಖೆ ವಶಕ್ಕೆ ತೆಗೆದುಕೊಳ್ಳಲು ಆದೇಶ ನೀಡಿದ್ದು ನಿಜವೇ:

ಆ) ಹಾಗಿದ್ದಲ್ಲಿ ತುಮಕೂರು ಆಯುಕ್ತರಿಗೆ ಟಿಪ್ಪಣಿಯನ್ನು ಮಂಡಿಸಿ ಜಮೀನನ್ನು ಆರೋಗ್ಯ ಇಲಾಖೆ ವಶಕ್ಕೆ ತೆಗೆದುಕೊಳ್ಳಲಾಗಿದೆಯೇ; ಹಾಗೂ ಈ ಆರೋಗ್ಯ ಕೇಂದ್ರವನ್ನು ಸರ್ಕಾರವು ಜಿಲ್ಲಾ ಪರಿಷತ್ತು ಅಥವಾ ಪ್ರಧಾನಿ ರೋಜಗಾರ್ ಯೋಜನೆಯಲ್ಲಿ ಸೇರಿಸಲಾಗಿದೆಯೇ, ಹಾಗಿದ್ದಲ್ಲಿ, ಎಂದಿನಿಂದ ಕಟ್ಟಡವನ್ನು ಪ್ರಾರಂಭಿಸಲಾಗುವುದು?

ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಅ) 1 ಲಕ್ಷ ರೂ. ದೇಣಿಗೆ ಕೊಟ್ಟಿರುವುದು ನಿಜವಿರುತ್ತದೆ. ಹಾಗೂ 124 ಸರ್ವೇ ನಂಬರಿನ ಕರಾಬು ಜಮೀನಿನಲ್ಲಿ ಆರೋಗ್ಯ ಕೇಂದ್ರ ಕಟ್ಟಲು ಜಮೀನನ್ನು ಇಲಾಖೆಗೆ ಇನ್ನೂ ಹಸ್ತಾಂತರಿಸಿರುವುದಿಲ್ಲ.

ಆ) ನಿವೇಶನ ಲಭ್ಯವಿಲ್ಲದೇ ಇರುವುದರಿಂದ ಕಟ್ಟಡ ಕಟ್ಟಲಾಗಿಲ್ಲ.

ಶ್ರೀ ಎನ್. ವೀರಣ್ಣಗೌಡ :- ಮಾನ್ಯ ಅಧ್ಯಕ್ಷರೇ, ಸರ್ಕಾರದ ಜಮೀನು ಇದ್ದರೂ ಕೂಡ ಮಾನ್ಯ ಮಂತ್ರಿಗಳು ನನಗೆ ಕೊಟ್ಟಿರುವ ಉತ್ತರದಲ್ಲಿ ಜಮೀನನ್ನು ಒದಗಿಸಿಲ್ಲ ಎಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾತು. ಸರ್ಕಾರದ ಜಮೀನು ಇದೆ. ನಾನು ಡಿ.ಸಿ.ಯವರಿಗೆ, ಡಿ.ಹೆಚ್.ಓ. ಅವರಿಗೆ ಮತ್ತು ಹಿಂದೆ ಇದ್ದಂಥ ಆರೋಗ್ಯ ಮಂತ್ರಿಗಳಿಗೂ ಸಹಿತ ಪತ್ರವನ್ನು ಕೊಟ್ಟಿದ್ದೇನೆ. ಈ ಕಟ್ಟಡಕ್ಕೆ 25 ಲಕ್ಷ ರೂಪಾಯಿಗಳ ಅಂದಾಜು ತಯಾರಾಗಿ ಎರಡು ವರ್ಷಗಳಿಂದ ಇದು ಪೆಂಡಿಂಗ್‌ನಲ್ಲಿದೆ. ಈ ಇಡಗೂರು ಗ್ರಾಮ ಏನಾಗಿದೆ ಎಂದರೆ ಇದು ತುರುವೇಕೆರೆ, ಗುಬ್ಬಿ ಮತ್ತು ಕುಣಿಗಲ್ - ಈ ಮೂರು ತಾಲ್ಲೂಕುಗಳಿಗೆ ಸೇರಿರತಕ್ಕಂಥ ಜಾಗ. ಇಲ್ಲಿ 15-20 ಕಿ.ಮೀ. ದೂರದಲ್ಲಿ ಎಲ್ಲಿಯೂ ಆಸ್ಪತ್ರೆಗಳು ಇಲ್ಲ. ಅಲ್ಲಿ ಕಟ್ಟಡ ಇಲ್ಲದೇನೆ ನೂರಾರು ಜನ ಬಂದು ಮರದ ಕೆಳಗೆ ನಿಂತುಕೊಳ್ಳಬೇಕಾಗಿರುವುದರಿಂದ ರೋಗಿಗಳಿಗೆ ಬಹಳ ಅನಾನುಕೂಲವಾಗಿದೆ. ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುವುದು ಏನೆಂದರೆ, ಈ ಸಾರಿ ಇದಕ್ಕೆ 25 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಮೂರನೇ ಒಂದು ಭಾಗವಾಗಿ 9 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಈ ವರ್ಷದಲ್ಲಿಯೇ ಕಟ್ಟಡವನ್ನು ಪೂರ್ಯಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೇ, ಜಿಲ್ಲಾಧಿಕಾರಿಗಳ ಮುಂದೆ ಪ್ರಸ್ತಾವನೆ ಇದ್ದರೆ ಆರೋಗ್ಯ ಇಲಾಖೆಗೆ ಬಂದಂತೆ ಆಗುತ್ತದೆ. ನಾವೂ ಕೂಡ ಅದನ್ನು ವಹಿಸಿಕೊಡಿ ಎಂದು ಕೇಳಿದ್ದೇವೆ. ಆದರೆ ಇದುವರೆಗೂ ಅವರು ವಹಿಸಿಕೊಟ್ಟಿಲ್ಲ. ಮಾನ್ಯ ಸದಸ್ಯರು ತಮ್ಮ ಪ್ರಭಾವವನ್ನು ಬೀರಿ ಜಾಗವನ್ನು ವಹಿಸಿಕೊಡತಕ್ಕಂಥ ಕೆಲಸ ಮಾಡಬೇಕು. ಎರಡನೇಯದು ಏನೆಂದರೆ, ನಾವು ಕಟ್ಟಡ ಕಟ್ಟಬೇಕಾದರೆ ಜಿಲ್ಲಾ ಪಂಚಾಯತ್‌ನವರು ಅದಕ್ಕೇ ಬೇಕಾಗಿರುವ ಮೂರನೇ ಒಂದು ಭಾಗದ ಹಣವನ್ನು ಇಟ್ಟು ಅಂದಾಜನ್ನು ನಮಗೆ ಕಳುಹಿಸಿಕೊಟ್ಟರೆ ನಾವು ಮಂಜೂರು ಮಾಡಿಕೊಡುತ್ತೇವೆ. ಈ ಎರಡು ಕೆಲಸಗಳು ಆಗಬೇಕು.

ಶ್ರೀ ಎನ್. ವೀರಣ್ಣಗೌಡ :- ಮಾನ್ಯ ಅಧ್ಯಕ್ಷರೇ, ಇನ್ನು ಹದಿನೈದು ದಿವಸದೊಳಗೆ ಜಮೀನನ್ನು ಮಂಜೂರು ಮಾಡಿಸಿಕೊಂಡು ಬಂದು ಅವರ ಇಲಾಖೆಗೆ ಟ್ರಾನ್ಸ್‌ಫರ್ ಮಾಡಿಸಿ ಕಾಗದವನ್ನು ನೇರವಾಗಿ ನಾನು ಮಾನ್ಯ ಸಚಿವರಿಗೆ ತಂದುಕೊಡುತ್ತೇನೆ. ಈ ಸಾರಿ 9 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಕಟ್ಟಡ ಕಟ್ಟಿಸಿಕೊಡುವುದಕ್ಕೆ ಆಶ್ವಾಸನೆಯನ್ನು ಕೊಡಬೇಕು ಸ್ವಾಮಿ. ನಾನು ಇನ್ನು ಹದಿನೈದು ದಿವಸಗಳಲ್ಲಿ ಜಮೀನಿಗೆ ಸಂಬಂಧಪಟ್ಟಂತೆ ಪತ್ರವನ್ನು ತಂದುಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೇ, ನಿವೇಶನ ನಮ್ಮ ಸ್ವಾಧೀನಕ್ಕೆ ಬರಬೇಕು. ಜಿಲ್ಲಾ ಪಂಚಾಯತಿಯವರು ಮೂರನೇ ಒಂದು ಭಾಗದ ಹಣ ಇಟ್ಟು ಅಂದಾಜನ್ನು ನಮ್ಮ ಸರ್ಕಾರಕ್ಕೆ ಕಳುಹಿಸಿಕೊಡಬೇಕು. ಆಗ ನಾವು ತೀರ್ಮಾನ ಮಾಡುವಂತಹ ಸಂದರ್ಭ ಬರುತ್ತದೆ.

ಶ್ರೀ ಎನ್. ವೀರಣ್ಣಗೌಡ :- ಮಾನ್ಯ ಅಧ್ಯಕ್ಷರೇ, ನಾನು ಅಲ್ಲಿ ಕೇಳಿ ಕೇಳಿ ಸಾಕಾಗಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಸರ್ಕಾರದಿಂದಲೇ ಒಂಬತ್ತು ಲಕ್ಷ ರೂಪಾಯಿಗಳ ಹಣ ಬಿಡುಗಡೆ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೇ, ಆ ನಿವೇಶನ ನಮ್ಮ ಸ್ವಾಧೀನಕ್ಕೆ ಬಂದಮೇಲೆ ಇವೆಲ್ಲಾ ಪರಿಶೀಲನೆಗೆ ಬರುತ್ತದೆ.

ಅಧ್ಯಕ್ಷರು :- ಮೊದಲು ನಿವೇಶನ ಕೊಡಿಸಿ.

ಕುಮಟಾ ಸರ್ಕಾರಿ ಆಸ್ಪತ್ರೆಯಲ್ಲಿ ಖಾಲಿಯಿರುವ ತಜ್ಞ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡುವುದು

243 (2098) ಶ್ರೀ ಮೋಹನ್ ಕೆ. ಶೆಟ್ಟಿ (ಕುಮಟಾ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಮಟಾದ ಸರ್ಕಾರಿ ಆಸ್ಪತ್ರೆಯಲ್ಲಿ ಗೈನಕಾಲಿಜಿಸ್ಟ್ ಹಾಗೂ ಎಂ.ಡಿ. ಅಥವಾ ಎಂ.ಎಸ್. ಡಾಕ್ಟರುಗಳ ಎರಡು ಹುದ್ದೆಗಳು ವರ್ಷಗಳಿಂದ ಖಾಲಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಬಡ, ದೀನ ದಲಿತರ ಹಾಗೂ ಹಿಂದುಳಿದ ನಾಗರಿಕರು ತೊಂದರೆ ಅನುಭವಿಸುತ್ತಿರುವ ಕಾರಣ ಈ ಎರಡು ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಖಾಲಿ ಇರುವ ತಜ್ಞ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಮತ್ತು ನಿವೃತ್ತ ಸರ್ಕಾರ ತಜ್ಞ ವೈದ್ಯರನ್ನು ಮತ್ತು ಗೌರವಧನದ ಆಧಾರದ ಮೇಲೆ ಹಾಗೂ ಖಾಸಗಿ ವೈದ್ಯರುಗಳನ್ನು ಸಮಾಲೋಚಕರನ್ನಾಗಿ ನೇಮಿಸಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಿದೆ.

ಶ್ರೀ ಮೋಹನ್ ಕೆ. ಶೆಟ್ಟಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ನಮ್ಮ ಕುಮಟಾ ತಾಲ್ಲೂಕಿನ ಜನರಲ್ ಆಸ್ಪತ್ರೆಯಲ್ಲಿ (8) ಮಂಜೂರಾದ ಹುದ್ದೆಗಳು ಇವೆ. ಅದರಲ್ಲಿ ಕೇವಲ (3) ಹುದ್ದೆಗಳನ್ನು ಮಾತ್ರ ತುಂಬಿದ್ದಾರೆ ಮತ್ತು 5) ಹುದ್ದೆಗಳು ಖಾಲಿ ಇವೆ. ಈ (5) ಹುದ್ದೆಗಳು ಏನಿವೆ ಅವು ಬಹಳ ಮುಖ್ಯವಾದುದು. ಈ 5 ಹುದ್ದೆಗಳು ಅಂದರೆ ಅದು ನಮ್ಮ ಬಡ ಜನರು ಆಹಾರ ಸೇವಿಸುವ ಹಾಗೆ ಅನ್ನ, ಸಾಂಬಾರ್ ಚಟ್ನಿ, ಉಪ್ಪಿನಕಾಯಿ ಇದ್ದಂತೆ. ಈಗ ಕುಮಟಾದಲ್ಲಿರುವ ಆ 3 ಡಾಕ್ಟರ್ಸ್ ಉತ್ತಮರಿದ್ದಾರೆ. ಆದರೆ ಬಡ ಸಾಮಾನ್ಯ ಜನರಿಗೆ ಗೈನಕಾಲಾಜಿಸ್ಟ್ ಜನರಲ್ ಮೆಡಿಸಿನ್, ಎಂ.ಡಿ. ಸರ್ಜನ್ ಮುಂತಾದ ಹುದ್ದೆಗಳು, ಆರೋಗ್ಯ ಮತ್ತು ಆರವಳಿಗೆ ತಜ್ಞರು ಮತ್ತು ಚಿಕ್ಕ ಮಕ್ಕಳ ತಜ್ಞರು ಈ ಹುದ್ದೆಗಳು ಖಾಲಿ ಇವೆ. ಆದರೆ ಈ ಹುದ್ದೆಗಳು ಸುಮಾರು 5 ವರ್ಷಗಳಿಂದ ಖಾಲಿ ಇವೆ. ಅದರಲ್ಲೂ ಒಂದು ಹುದ್ದೆ ಗೈನಕಾಲಾಜಿಸ್ಟ್ ಎಂದು ಹೇಳಿ ಬಹಳ ಮುಖ್ಯವಾದ ಹುದ್ದೆ. ಅಲ್ಲಿ 2 ವರ್ಷಗಳಿಂದ ಡಾಕ್ಟರ್ ಟಿ.ಎನ್. ಹೆಗಡೆ ಅಂತ ಬಹಳ ಒಳ್ಳೆಯ ನುರಿತ ಗೈನಕಾಲಾಜಿಸ್ಟ್ ಇದ್ದರು. ಅವರು ಜನರಲ್ ಮೆಡಿಸನ್ಸ್‌ಗೂ ಸಹ ಟ್ರೀಟ್‌ಮೆಂಟ್ ಕೊಡುತ್ತಿದ್ದರು. ಅಂತಹವರಿಗೆ ಇರುವ ಕ್ಷೇತ್ರದ ಲೋಕಲ್ ಎಂ.ಎಲ್.ಎ. ರವರಿಗೆ ಕೇಳದೇ ವಿ.ಆರ್.ಎಸ್. ಕೊಟ್ಟಿದ್ದಾರೆ. ಅವರ